# Akashvani : Bangalore
# National Bulletin In Kannada
# 02.09.2024 / 13.10 hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**02.09.2024 / 13.10 hrs**

<><*<><>*><>

<u>ಮುಖ್ಯಾಂಶಗಳು</u>

೧. ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದಿನಿಂದ ಮಹಾರಾಷ್ಟ್ರಕ್ಕೆ ಮೂರು ದಿನಗಳ ಭೇಟಿ

೨. ನಾಳೆಯಿಂದ ಪ್ರಧಾನಿ ನರೇಂದ್ರ ಮೋದಿ ಬ್ರೂನೈ ಮತ್ತು ಸಿಂಗಾಪುರಕ್ಕೆ ಮೂರು ದಿನಗಳ ಪ್ರವಾಸ

೩. ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ; ಪುರುಷರ ಹೈಜಂಪ್‌ನಲ್ಲಿ ಭಾರತದ ನಿಶಾದ್‌ಕುಮಾರ್‌ಗೆ ಬೆಳ್ಳಿ

೪. ಫುಟ್ಬಾಲ್ ; ಇಂದು ಲಖನೌನಲ್ಲಿ ಮೋಹನ್ ಬಗಾನ್ ಮತ್ತು ಈಸ್ಟ್ ಬೆಂಗಾಲ್ ಎಫ್‌ಸಿ ಮುಖಾಮುಖಿ

<><*<><>*><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದಿನಿಂದ ಮಹಾರಾಷ್ಟ್ರಕ್ಕೆ ಮೂರು ದಿನಗಳ ಭೇಟಿ ನೀಡಲಿದ್ದಾರೆ. ಭೇಟಿಯ ಮೊದಲ ದಿನ ಅವರು ಕೊಲ್ಲಾಪುರದ ವಾರಣಾನಗರದಲ್ಲಿ ಶ್ರೀ ವಾರಣಾ ಮಹಿಳಾ ಸಹಕಾರ ಸಂಘದ ಸುವರ್ಣ ಮಹೋತ್ಸವದಲ್ಲಿ ಭಾಗವಹಿಸಲಿದ್ದಾರೆ. ಎರಡನೇ ದಿನ, ಅವರು ಪುಣೆಯಲ್ಲಿ ಸಿಂಬಯಾಸಿಸ್ ಇಂಟರ್‌ನ್ಯಾಷನಲ್ ಸ್ವಾಯತ್ತ ವಿಶ್ವವಿದ್ಯಾಲಯದ ೨೧ ನೇ ಘಟಿಕೋತ್ಸವವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಬಳಿಕ ರಾಷ್ಟ್ರಪತಿ ಮುಂಬೈನಲ್ಲಿ ಮಹಾರಾಷ್ಟ್ರ ವಿಧಾನ ಪರಿಷತ್ತಿನ ಶತಮಾನೋತ್ಸವ ಸಮಾರಂಭದಲ್ಲಿಯೂ ಭಾಗವಹಿಸಲಿದ್ದಾರೆ. ಪ್ರವಾಸದ ಕೊನೆಯ ದಿನದಂದು, ಅವರು ಲಾತೂರ್‌ನ ಉದ್ಗೀರ್‌ನಲ್ಲಿ ಬುದ್ಧ ವಿಹಾರವನ್ನು ಉದ್ಘಾಟಿಸಲಿದ್ದಾರೆ.

<><*<><>*><>

ಪ್ರಧಾನಿ ನರೇಂದ್ರ ಮೋದಿ ಅವರು ನಾಳೆ ಬ್ರೂನೈ ಮತ್ತು ಸಿಂಗಾಪುರಕ್ಕೆ ಮೂರು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ. ಇಂದು ನವದೆಹಲಿಯಲ್ಲಿ ಮಾಧ್ಯಮಗಳಿಗೆ ಮಾಹಿತಿ ನೀಡಿದ ಸರ್ಕಾರದ ಕಾರ್ಯದರ್ಶಿ ಜೈದೀಪ್ ಮಜುಂದಾರ್, ಬ್ರೂನೈಗೆ ಭಾರತದ ಪ್ರಧಾನಿಯೊಬ್ಬರ ಮೊದಲ ದ್ವಿಪಕ್ಷೀಯ ಭೇಟಿ ಇದಾಗಿದೆ ಎಂದು ಹೇಳಿದರು. ಭಾರತ ಮತ್ತು ಬ್ರೂನೈ ನಡುವಿನ ರಾಜತಾಂತ್ರಿಕ ಸಂಬಂಧಗಳ ಸ್ಥಾಪನೆಯ ೪೦ ನೇ ವಾರ್ಷಿಕೋತ್ಸವದ ಹಿನ್ನೆಲೆ ಈ ಭೇಟಿ ಮಹತ್ವ ಪಡೆದುಕೊಂಡಿದೆ. ಭಾರತದ ಆಕ್ಟ್ ಈಸ್ಟ್ ನೀತಿ ಮತ್ತು ಇಂಡೋ-ಪೆಸಿಫಿಕ್‌ನ ದೃಷ್ಟಿಯಲ್ಲಿ ಬ್ರೂನೈ ಪ್ರಮುಖ ಪಾಲುದಾರ ಎಂದು ಮಜುಂದಾರ್ ಹೇಳಿದರು. ತಮ್ಮ ಪ್ರವಾಸದ ಎರಡನೇ ಹಂತದಲ್ಲಿ, ಪ್ರಧಾನಿಯವರು ಇದೇ ೪ ಮತ್ತು ೫ ರಂದು ಸಿಂಗಾಪುರಕ್ಕೆ ಭೇಟಿ ನೀಡಲಿದ್ದಾರೆ. ಸುಮಾರು ಆರು ವರ್ಷಗಳ ನಂತರ ಪ್ರಧಾನಿ ಸಿಂಗಾಪುರಕ್ಕೆ ಭೇಟಿ ನೀಡುತ್ತಿದ್ದಾರೆ.

<><*<><>*><>

ಭಾರೀ ಮಳೆ ಮತ್ತು ಪ್ರವಾಹಕ್ಕೆ ಸಿಲುಕಿರುವ ಆಂಧ್ರಪ್ರದೇಶ ಹಾಗೂ ತೆಲಂಗಾಣಕ್ಕೆ ಎಲ್ಲ ನೆರವನ್ನು ಕೇಂದ್ರದಿಂದ ನೀಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದರು. ಈ ಕುರಿತು ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹಾಗೂ ತೆಲಂಗಾಣದ ಮುಖ್ಯಮಂತ್ರಿ ಎ. ರೇವಂತ ರೆಡ್ಡಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಹೈದರಾಬಾದ್ ಸೇರಿದಂತೆ ತೆಲಂಗಾಣದ ಹಲವೆಡೆ ನಿನ್ನೆಯೂ ಭಾರೀ ಮಳೆಯಾಗಿದೆ. ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಎಲ್ಲಾ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ರಜೆ ನೀಡಲಾಗಿದೆ.

<><*<><>*><>

ಇಂದಿನಿಂದ ಬಿಜೆಪಿ ಸದಸ್ಯತ್ವ ಅಭಿಯಾನ ಆರಂಭಿಸಲಿದೆ. ಬಿಜೆಪಿ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಅವರಿಂದ ಸದಸ್ಯತ್ವ ನವೀಕರಣದ ಪ್ರಮಾಣಪತ್ರವನ್ನು ಪ್ರಧಾನಿ ನರೇಂದ್ರ ಮೋದಿ ಪಡೆಯುವುದರೊಂದಿಗೆ ಈ ಅಭಿಯಾನವನ್ನು ಪ್ರಾರಂಭಿಸಲಾಗುವುದು. ಅಸ್ತಿತ್ವದಲ್ಲಿರುವ ಎಲ್ಲಾ ಸದಸ್ಯರು ತಮ್ಮ ಸದಸ್ಯತ್ವವನ್ನು ನವೀಕರಿಸಬೇಕಾಗಿದೆ. ಬಿಜೆಪಿಯ ಸಂವಿಧಾನದ ಪ್ರಕಾರ, ಪ್ರತಿ ಐದರಿಂದ ಆರು ವರ್ಷಗಳಿಗೊಮ್ಮೆ ಸದಸ್ಯತ್ವ ಅಭಿಯಾನವನ್ನು ಹೊಸದಾಗಿ ನಡೆಸಲಾಗುತ್ತದೆ. ಇಂದಿನಿಂದ ನವೆಂಬರ್ ೧೦ ರವರೆಗೆ ಹಂತ ಹಂತವಾಗಿ ಅಭಿಯಾನ ನಡೆಯಲಿದ್ದು, ಸದಸ್ಯತ್ವ ಅಭಿಯಾನದ ಮೊದಲ ಹಂತ ಇದೇ ೨೫ ರಂದು ಮುಕ್ತಾಯಗೊಳ್ಳಲಿದೆ. ಸದಸ್ಯತ್ವಕ್ಕೆ ಮಿಸ್ಡ್ ಕಾಲ್ ಮೂಲಕ ಅಥವಾ ಪಕ್ಷದ ಜಾಲತಾಣ ಇಲ್ಲವೆ ಇತರ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ಸೈನ್ ಅಪ್ ಮಾಡಬಹುದು.

<><*<><>*><>

ಸರಕು ಮತ್ತು ಸೇವಾ ತೆರಿಗೆ-ಜಿಎಸ್‌ಟಿ ಸಂಗ್ರಹ ಆಗಸ್ಟ್‌ನಲ್ಲಿ ೧.೭೫ ಲಕ್ಷ ಕೋಟಿ ರೂಪಾಯಿಗಳಷ್ಟಾಗಿತ್ತು. ಕಳೆದ ವರ್ಷದ ಇದೇ ತಿಂಗಳಿನಲ್ಲಿ ೧.೫೯ ಲಕ್ಷ ಕೋಟಿ ರೂಪಾಯಿಗಳಿಗೆ ಹೋಲಿಸಿದರೆ ಶೇಕಡಾ ೧೦ ರಷ್ಟು ಹೆಚ್ಚಳವನ್ನು ಈ ಸಂಗ್ರಹ ಪ್ರತಿಬಿಂಬಿಸುತ್ತದೆ. ಮರುಪಾವತಿಗೆ ಸರಿಹೊಂದಿಸುವ ಮೊದಲು ಕೇಂದ್ರ ಸರ್ಕಾರ ೩೦,೮೬೨ ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದರೆ, ರಾಜ್ಯಗಳು ೩೮ ಕೋಟಿ ೪೧೧ ಲಕ್ಷ ರೂಪಾಯಿಯನ್ನು ಸಂಗ್ರಹಿಸಿವೆ. ಆಮದು ಮತ್ತು ಅಂತರ-ರಾಜ್ಯ ಮಾರಾಟದ ಮೇಲಿನ ಇಂಟಿಗ್ರೇಟೆಡ್ ಜಿಎಸ್‌ಟಿ (ಐಜಿಎಸ್‌ಟಿ) ಸಂಗ್ರಹವು ೯೩ ಕೋಟಿ ೬೨೧ ಲಕ್ಷ ರೂಪಾಯಿಗಳಷ್ಟಾಗಿತ್ತು. ದೇಶೀಯ ವಹಿವಾಟುಗಳಿಂದ ಒಟ್ಟು ಜಿಎಸ್‌ಟಿ ಆದಾಯ ಶೇಕಡಾ ೯.೨ ರಷ್ಟು ಏರಿಕೆಯಾಗಿ ಸುಮಾರು ೧.೨೫ ಲಕ್ಷ ಕೋಟಿ ರೂಪಾಯಿಗಳಿಗೆ ತಲುಪಿದೆ. ಹಿಂದಿನ ವರ್ಷದ ಅಂಕಿಅಂಶಗಳಿಗೆ ಹೋಲಿಸಿದರೆ ಸರಕುಗಳ ಆಮದು ಆದಾಯವು ಶೇಕಡಾ ೧೨.೧ ರಷ್ಟು ಹೆಚ್ಚಾಗಿ ೪೯ ಕೋಟಿ ೯೭೬ ಲಕ್ಷ ರೂಪಾಯಿಗಳಿಗೆ ತಲುಪಿದೆ. ಆಗಸ್ಟ್‌ವರೆಗೆ ನಿವ್ವಳ ಜಿಎಸ್‌ಟಿ ಆದಾಯವು ೮.೦೭ ಲಕ್ಷ ಕೋಟಿ ರೂಪಾಯಿಗಳಾಗಿದ್ದು, ಹಿಂದಿನ ವರ್ಷಕ್ಕಿಂತ ೧೦.೨ ಶೇಕಡಾ ಹೆಚ್ಚಾಗಿದೆ.

<><*<><>*><>

ಮಣಿಪುರದ ಇಂಫಾಲ್ ಜಿಲ್ಲೆಯಲ್ಲಿ ನಿನ್ನೆ ಕುಕಿ ಉಗ್ರರು ಡ್ರೋನ್, ಬಾಂಬ್‌ಗಳು ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಿ ಕೌತ್ರುಕ್ ಗ್ರಾಮಸ್ಥರ ಮೇಲೆ ನಡೆಸಿದ ದಾಳಿಯಲ್ಲಿ ೩೧ ವರ್ಷದ ಮಹಿಳೆ ಸೇರಿದಂತೆ ಇಬ್ಬರು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯಲ್ಲಿ ಮೃತ ಮಹಿಳೆಯ ೮ ವರ್ಷದ ಮಗಳು ಮತ್ತು ಇಬ್ಬರು ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದಾರೆ. ಕುಕಿ

ಉಗ್ರಗಾಮಿಗಳು ನಿರಾಯುಧ ಗ್ರಾಮಸ್ಥರಲ್ಲಿ ಭೀತಿ ಸೃಷ್ಟಿಸುವ ಇಂತಹ ಕೃತ್ಯವು ರಾಜ್ಯದಲ್ಲಿ ಶಾಂತಿ ಸ್ಥಾಪಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಪ್ರಯತ್ನಗಳನ್ನು ಹಳಿತಪ್ಪಿಸುವ ಪ್ರಯತ್ನವಾಗಿದೆ ಎಂದು ಗೃಹ ಇಲಾಖೆ ಹೇಳಿದೆ.

<><*<><>*><>

೨೦೨೪ ರ ಪ್ಯಾರಾಲಿಂಪಿಕ್ಸ್‌ನ ನಾಲ್ಕನೇ ದಿನವಾದ ನಿನ್ನೆ ಭಾರತೀಯ ತಂಡವು ಉತ್ತಮ ಪ್ರದರ್ಶನ ಮುಂದುವರೆಸಿತು. ಅಥ್ಲೆಟಿಕ್ಸ್‌ನಲ್ಲಿ ಭಾರತದ ಅಥ್ಲೀಟ್ ನಿಶಾದ್ ಕುಮಾರ್ ಪುರುಷರ ಹೈಜಂಪ್-ಟಿ-೪೭ ಸ್ಪರ್ಧೆಯಲ್ಲಿ ೨.೦೪ ಮೀಟರ್ ದೂರ ಕ್ರಮಿಸಿ ಬೆಳ್ಳಿ ಪದಕ ಗೆದ್ದಿದ್ದಾರೆ. ಇದರೊಂದಿಗೆ ಒಂದು ಚಿನ್ನ, ಎರಡು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳನ್ನು ಒಳಗೊಂಡಂತೆ ಭಾರತದ ಒಟ್ಟು ಪದಕಗಳ ಸಂಖ್ಯೆ ಏಳಕ್ಕೆ ಏರಿದೆ. ಈ ಮಧ್ಯೆ, ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನ ಮಹಿಳೆಯರ ೨೦೦ ಮೀಟರ್ ಟಿ೩೫ ಸ್ಪರ್ಧೆಯಲ್ಲಿ ಮೂರನೇ ಸ್ಥಾನ ಪಡೆಯುವ ಮೂಲಕ ಪ್ರೀತಿ ಪಾಲ್ ಅವರು ಎರಡನೇ ಕಂಚಿನ ಪದಕವನ್ನು ಪಡೆದರು. ಚೀನಾದ ಝೌ ಕ್ಸಿಯಾ ಮತ್ತು ಗುವೊ ಕಿಯಾನ್ಕಿಯಾನ್ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದರು. ಪ್ರೀತಿ ಪಾಲ್ ಇದಕ್ಕೂ ಮುನ್ನ ಮಹಿಳೆಯರ ೧೦೦ ಮೀಟರ್ ಟಿ೩೫ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದಿದ್ದರು. ಭಾರತದ ಪ್ಯಾರಾ ಷಟ್ಲರ್ ತುಳಸಿಮತಿ ಮುರುಗೇಶನ್ ಅವರು ಮಹಿಳೆಯರ ಎಸ್‌ಯು-೫ ಬ್ಯಾಡ್ಮಿಂಟನ್ ಸ್ಪರ್ಧೆಯ ಫೈನಲ್‌ಗೆ ಪ್ರವೇಶಿಸಿದ್ದಾರೆ. ದೇಶದವರೇ ಆದ ಮನೀಶಾ ರಾಮದಾಸ್ ವಿರುದ್ಧ ಜಯಗಳಿಸುವ ಮೂಲಕ ಮುರುಗೇಶನ್ ಫೈನಲ್ ಸುತ್ತಿಗೆ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾರೆ. ಭಾನುವಾರ ರಾತ್ರಿ ನಡೆದ ಸೆಮಿಫೈನಲ್‌ನಲ್ಲಿ ತಮಿಳುನಾಡಿನ ಅಗ್ರ ಶ್ರೇಯಾಂಕದ ಮುರುಗೇಶನ್ ೨೩-೨೧, ೨೧-೧೭ ಅಂಕಗಳಿಂದ ಜಯಗಳಿಸಿದರು. ಈ ಗೆಲುವಿನೊಂದಿಗೆ ಮುರುಗೇಶನ್ ಬೆಳ್ಳಿ ಪದಕವನ್ನು ಖಚಿತ ಪಡಿಸಿದ್ದಾರೆ. ಅವರು ಫೈನಲ್‌ನಲ್ಲಿ ಚೀನಾದ ಯಾಂಗ್ ಕ್ಯುಕ್ಸಿಯಾ ಅವರನ್ನು ಎದುರಿಸಲಿದ್ದಾರೆ. ಭಾರತದ ಷಟ್ಲರ್ ನಿತೇಶ್ ಕುಮಾರ್ ಅವರು ಪುರುಷರ ಸಿಂಗಲ್ಸ್ ಎಸ್‌ಎಲ್ ೩ ಸೆಮಿಫೈನಲ್‌ನಲ್ಲಿ ಜಪಾನ್‌ನ ಡೈಸುಕೆ ಫುಜಿಹರಾ ಅವರನ್ನು ನೇರ ಸೆಟ್‌ಗಳಿಂದ ಸೋಲಿಸಿ ಚಿನ್ನದ ಪದಕದ ಸುತ್ತಿಗೆ ಪ್ರವೇಶಿಸಿದರು. ನಿತೇಶ್ ಫೈನಲ್‌ನಲ್ಲಿ ಗ್ರೇಟ್ ಬ್ರಿಟನ್‌ನ ಬೆಥೆಲ್ ಡೇನಿಯಲ್ ಅವರನ್ನು ಎದುರಿಸಲಿದ್ದಾರೆ. ಮತ್ತೊಂದೆಡೆ, ಸುಹಾಸ್ ಯತಿರಾಜ್ ೨೧-೧೭, ೨೧-೧೯ ರಲ್ಲಿ ದೇಶದ ಸುಕಾಂತ್ ಕದಮ್ ಅವರನ್ನು ಸೋಲಿಸಿ ಎಸ್‌ಎಲ್೪ ಫೈನಲ್ ಪ್ರವೇಶಿಸಿದರು. ಯತಿರಾಜ್ ಫೈನಲ್‌ನಲ್ಲಿ ಟೋಕಿಯೊ ಪ್ಯಾರಾಲಿಂಪಿಕ್ ಚಿನ್ನದ ಪದಕ ವಿಜೇತ ಲುಕಾಸ್ ಮಜೂರ್ ಅವರನ್ನು ಎದುರಿಸಲಿದ್ದಾರೆ ಮತ್ತು ಸುಕಾಂತ್ ಕಂಚಿನ ಪದಕಕ್ಕಾಗಿ ಇಂಡೋನೇಷ್ಯಾದ ಫ್ರೆಡಿ ಸೆಟಿಯಾವಾನ್ ಅವರನ್ನು ಎದುರಿಸಲಿದ್ದಾರೆ. ಟೇಬಲ್ ಟೆನಿಸ್‌ನಲ್ಲಿ, ಪ್ಯಾಡ್ಲರ್ ಭಾವಿನಾಬೆನ್ ಪಟೇಲ್ ಅವರು ಮೆಕ್ಸಿಕನ್ ಅಥ್ಲೀಟ್ ಮಾರ್ಥಾ ವರ್ಡಿನ್ ಅವರನ್ನು ನೇರ ಗೇಮ್‌ಗಳಲ್ಲಿ ಸೋಲಿಸಿ ಡಬ್ಲ್ಯುಎಸ್-೪ ಈವೆಂಟ್‌ನ ಕ್ವಾರ್ಟರ್-ಫೈನಲ್‌ನಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾರೆ.

<><*<><>*><>

ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್‌ನಲ್ಲಿ, ಭಾರತದ ಪ್ಯಾರಾ ಅಥ್ಲೀಟ್ ಪ್ರೀತಿ ಪಾಲ್ ಅವರು, ಮಹಿಳೆಯರ ೨೦೦ ಮೀಟರ್ಸ್ - ಟಿ-೩೫ ಫೈನಲ್‌ನಲ್ಲಿ ಕಂಚಿನ ಪದಕವನ್ನು ಗೆದ್ದು ಭಾರತಕ್ಕೆ ಮತ್ತೊಂದು ಪದಕವನ್ನು ಖಚಿತಪಡಿಸಿದರು. ಪ್ರೀತಿ ಪಾಲ್ ಅವರು ೩೦.೦೧ ಸೆಕೆಂಡ್‌ಗಳ ವೈಯಕ್ತಿಕ ಅತ್ಯುತ್ತಮ ಟೈಮಿಂಗ್‌ನೊಂದಿಗೆ ಪದಕ ತಮ್ಮದಾಗಿಸಿಕೊಂಡರು. ಈ ಗೆಲುವಿನೊಂದಿಗೆ, ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದ ಮೊದಲ ಟ್ರ್ಯಾಕ್ ಮತ್ತು ಫೀಲ್ಡ್ ಭಾರತೀಯ ಮಹಿಳಾ ಪ್ಯಾರಾ ಅಥ್ಲೀಟ್ ಎನಿಸಿಕೊಂಡರು. ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡನೇ ಪದಕ ಗೆದ್ದ ಪ್ರೀತಿ ಪಾಲ್ ಅವರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಭಿನಂದಿಸಿದ್ದಾರೆ. ಉಪರಾಷ್ಟ್ರಪತಿ

ಜಗದೀಪ್ ಧನಕರ್ ಅವರು, ಪ್ರೀತಿ ಪಾಲ್ ಅವರನ್ನು ಶ್ಲಾಘಿಸಿದ್ದಾರೆ. ಪ್ರೀತಿ ಪಾಲ್ ಅವರ ಐತಿಹಾಸಿಕ ಸಾಧನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಕೂಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಪುರುಷರ ಹೈ ಜಂಪ್ ಟಿ-೪೭ ಈವೆಂಟ್‌ನಲ್ಲಿ ಬೆಳ್ಳಿ ಪದಕ ಗೆದ್ದ ನಿಶಾದ್ ಕುಮಾರ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ನಿಶಾದ್ ಕುಮಾರ್ ಅವರ ಉತ್ಸಾಹ ಮತ್ತು ದೃಢತೆಯನ್ನು ಪ್ರಧಾನಿ ಶ್ಲಾಘಿಸಿದ್ದಾರೆ. ಪ್ರತಿಯೊಬ್ಬ ವಿಜೇತರನ್ನು ಪ್ರಧಾನಿ ಮೋದಿ ಅಭಿನಂದಿಸಿದರು ಮತ್ತು ಅವರು ತಮ್ಮ ಪ್ರದರ್ಶನದಿಂದ ದೇಶಕ್ಕೆ ಹೆಮ್ಮೆ ತಂದಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

<><*<><>*><>

ಇಂದು ಲಕ್ನೋದಲ್ಲಿ ನಡೆಯಲಿರುವ ಫುಟ್ಬಾಲ್ ಪಂದ್ಯಾವಳಿಯಲ್ಲಿ ಮೋಹನ್ ಬಗಾನ್ ಮತ್ತು ಈಸ್ಟ್ ಬೆಂಗಾಲ್ ಎಫ್‌ಸಿ ಮುಖಾಮುಖಿಯಾಗಲಿವೆ. ಇದೇ ಮೊದಲ ಬಾರಿಗೆ ಲಕ್ನೋದಲ್ಲಿ ಈ ಇಬ್ಬರು ಪ್ರತಿಸ್ಪರ್ಧಿಗಳ ನಡುವೆ ಪಂದ್ಯ ನಡೆಯುತ್ತಿದೆ. ಇಂದು ಸಂಜೆ ೬:೩೦ಕ್ಕೆ ಆರಂಭವಾಗಲಿರುವ ಪಂದ್ಯವನ್ನು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ವೀಕ್ಷಿಸಲಿದ್ದಾರೆ. ಪಂದ್ಯವನ್ನು ಅಖಿಲ ಭಾರತ ಫುಟ್ಬಾಲ್ ಫೆಡರೇಶನ್ ಉತ್ತರ ಪ್ರದೇಶ ಸರ್ಕಾರ, ಉತ್ತರ ಪ್ರದೇಶ ಫುಟ್ಬಾಲ್ ಸಂಘ ಮತ್ತು ಕ್ರೀಡಾ ಭಾರತಿ ಸಹಯೋಗದೊಂದಿಗೆ ಆಯೋಜಿಸಲಾಗಿದೆ. ಪಂದ್ಯದ ಉದ್ದೇಶ ರಾಜ್ಯದಲ್ಲಿ ಫುಟ್ಬಾಲ್ ಅನ್ನು ಅಭಿವೃದ್ಧಿಪಡಿಸುವುದು ಮತ್ತು ಉತ್ತೇಜಿಸುವುದಾಗಿದೆ.

<><*<><>*><>

ಯುಎಸ್ ಓಪನ್‌ನ ಪುರುಷರ ಡಬಲ್ಸ್‌ನ ಮೂರನೇ ಸುತ್ತಿನಲ್ಲಿ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿ ಸೋಲಿನೊಂದಿಗೆ ಭಾರತದ ಪದಕ ಭೇಟಿ ಕೊನೆಗೊಂಡಿತು. ಎರಡನೇ ಶ್ರೇಯಾಂಕದ ಬೋಪಣ್ಣ-ಎಬ್ಡೆನ್ ಜೋಡಿಯನ್ನು ೧೬ನೇ ಶ್ರೇಯಾಂಕದ ಅರ್ಜೆಂಟೀನಾದ ಜೋಡಿ ಮ್ಯಾಕ್ಸಿಮೊ ಗೊನ್ಜಾಲೆಜ್ ಮತ್ತು ಆಂಡ್ರೆಸ್ ಮೊಲ್ಟೆನಿ ೧-೬, ೫-೭ ರಿಂದ ಸೋಲಿಸಿದರು.

ಸುಮಿತ್ ನಗಾಲ್ ಆರಂಭಿಕ ಸುತ್ತಿನ ಸೋಲಿನೊಂದಿಗೆ ಪುರುಷರ ಸಿಂಗಲ್ಸ್‌ನಿಂದ ನಿರ್ಗಮಿಸಿದರೆ, ಪಂದ್ಯಾವಳಿಯ ವಿವಿಧ ಹಂತಗಳಲ್ಲಿ ಪುರುಷರ ಡಬಲ್ಸ್‌ನಲ್ಲಿ ಯೂಕಿ ಭಾಂಬ್ರಿ ಮತ್ತು ಎನ್. ಶ್ರೀರಾಮ್ ಬಾಲಾಜಿ ಸೋಲನುಭವಿಸಿದರು. ಇಂಡೋನೇಷ್ಯಾದ ಅಲ್ದಿಲಾ ಸುಟ್ಜಿಯಾಡಿ ಜತೆಯಾಟದ ಮಿಶ್ರ ಡಬಲ್ಸ್‌ನಲ್ಲಿ ಬೋಪಣ್ಣ ಅವರ ಪದಕ ನಿರೀಕ್ಷೆ ಇನ್ನೂ ಜೀವಂತವಾಗಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ ೨.೩೦ ಕ್ಕೆ <>*><>